**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಇ.ಸಿ.ಎ. 1/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್.ದಯಾನಂದಯ್ಯ | ಪಿ.ಡಬ್ಲ್ಯೂ.3 |
| ತಂದೆಯ/ಗಂಡನ ಹೆಸರು | : | ಶಿವರಾಮಯ್ಯ | |
| ವಯಸ್ಸು | : | 54 ವರ್ಷ | |
| ಕೆಲಸ | : | ಎ.ಎಸ್.ಐ., ಹೊಳಲ್ಕೆರೆ ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿಃ20.08.2025 |

**ಮುಖ್ಯ ವಿಚಾರಣೆ ಅರ್ಜಿದಾರರ ಪರ : ಶ್ರೀ ಎಲ್.ಕೆ.ಎಸ್. ಯವರಿಂದಃ**

ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. ದಿನಾಂಕ 27.06.2018 ರಂದು ಮದ್ಯಾಹ್ನ 1.45 ರ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಪಿರ್ಯಾದುದಾರರಾದ ಮಂಜುನಾಥ ಬಿನ್ ಮುರುಗೇಂದ್ರಪ್ಪರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿಕೊಂಡು, ಠಾಣಾ ಮೊಕದ್ದಮೆ ಸಂಖ್ಯೆ 213/2018 ರಂತೆ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 337 ರ ಡಿಯಲ್ಲಿ ಪ್ರ.ವ. ವರದಿಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಮದ್ಯಾಹ್ನ 4 ಗಂಟೆಗೆ ಅಪಘಾತ ನಡೆದ ಸ್ಥಳಕ್ಕೆ ಭೇಟಿನೀಡಿ ಪ್ರತ್ಯಕ್ಷ ಸಾಕ್ಷಿದಾರರಾದ ನಾಗರಾಜ ಬಿನ್ ಮಂಜಪ್ಪ ರವರು ಸ್ಥಳ ತೋರಿಸಿದ ಮೇರೆಗೆ ಪಂಚರಾದ ರವಿ ಬಿನ್ ಶಿವಲಿಂಗಪ್ಪ ಮತ್ತು ರಮೇಶ ಬಿನ್ ಹನುಮಂತಪ್ಪರವರ ಸಮಕ್ಷಮ ಸಂಜೆ 5 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ದಿನಾಂಕ 04.07.2018 ರಂದು ಸದರಿ ಪ್ರಕರಣದ ಆರೋಪಿ ಸಣ್ಣ ಕೆಂಚಪ್ಪ ಬಿನ್ ಮಹೇಶ್ವರಪ್ಪರವರು ಠಾಣೆಗೆ ಬಂದು ಅಪಘಾತಪಡಿಸಿದ ಕೆ.ಎ.16/ಇ.ಎಫ್.-6937 ರ ಬೈಕನ್ನು ಹಾಜರುಪಡಿಸಿದ್ದು, ಪಂಚರಾದ ಪ್ರಸನ್ನ ಕುಮಾರ್ ಬಿನ್ ಬನಪ್ಪ ಮತ್ತು ಜೆ.ಎಸ್.ಮುರಗೇಶ್ ಬಿನ್ ಸಿದ್ದಪ್ಪರವರ ಸಮಕ್ಷಮ ಠಾಣಾ ಆವರಣದಲ್ಲಿ ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಅಮಾನತ್ತು ಪಂಚನಾಮೆಯ ಮೂಲಕ ಬೈಕನ್ನು ವಶಕ್ಕೆ ಪಡೆದಿರುತ್ತೇನೆ. ದಿನಾಂಕ 04.07.2018 ರಂದು ಚಿತ್ರದುರ್ಗದ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಬಂದ ಐ.ಎಂ.ವಿ. ವರದಿಯನ್ನು ಸ್ವೀಕರಿಸಿರುತ್ತೇನೆ. ದಿನಾಂಕ 02.08.2018 ರಂದು ಗಾಯಾಳು ಸಂತೋಷ ಬಿನ್ ಶೇಖರಪ್ಪ ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.25 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿ ನಿಪಿ.2 ರ ದೂರಿನ ದೃಢೀಕೃತ ಪ್ರತಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ.1 ರಿಂದ

4 ರಂತೆ ಹಾಜರುಪಡಿಸಿರುವ ದೂರು, ಪ್ರ.ವ. ವರದಿ, ಸ್ಥಳ ಮಹಜರು ಹಾಗೂ ವಾಹನ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ. ಯವರಿಂದಃ</u>**

2. ನಿಪಿ.2 ರಂತೆ ಪಿರ್ಯಾದುದಾರರಾದ ಮಂಜುನಾಥ ಬಿನ್ ಮುರುಗೇಂದ್ರಪ್ಪರವರು ನೀಡಿರುವ ದೂರಿನ ಪ್ರಕಾರ ಸಂತೋಷ್ ರವರಿಗೆ ಸಣ್ಣ ಕೆಂಚಪ್ಪರವರಿಗೆ ಸೇರಿದ ಕೆ.ಎ.16/ಇ.ಎಫ್.-6937 ರ ಬೈಕು ಡಿಕ್ಕಿಪಡಿಸಿದ್ದು, ಆ ಕುರಿತು ನಾನು ದೂರನ್ನು ಸ್ವೀಕರಿಸಿಕೊಂಡು ಪ್ರ.ವ. ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿ. ನಾನು ನಿಪಿ.2 ರ ದೂರಿನ ಕುರಿತಾಗಿ ನಿಪಿ.1 ರಂತೆ ಪ್ರ.ವ. ವರದಿಯನ್ನು ದಾಖಲಿಸಿಕೊಂಡು ಆ ನಂತರ ನಿಪಿ.3 ರ ಪ್ರಕಾರ ಸ್ಥಳ ಪಂಚನಾಮೆಯನ್ನು ಮಾಡಿದ್ದೇನೆ ಎಂದರೆ ಸರಿ. ನಾನು ಸ್ಥಳ ಪಂಚನಾಮೆಯನ್ನು ಮಾಡುವ ಕಾಲಕ್ಕೆ ಪ್ರತ್ಯಕ್ಷದಾರರಾದ ನಾಗರಾಜು ಮತ್ತು ಮಹಜರಿನ ಸಾಕ್ಷಿದಾರರಾದ ಎಸ್.ರವಿ ಬಿನ್ ಶಿವಲಿಂಗಪ್ಪ ಮತ್ತು ಹೆಚ್.ರಮೇಶ್ ಬಿನ್ ಹನುಮಂತಪ್ಪರವರು ಸಹ ಇದ್ದರು ಎಂದರೆ ಸರಿ. ಈ ಅಪಘಾತದ ನಂತರದಲ್ಲಿ ಅಪಘಾತಕ್ಕೆ ಕಾರಣವಾದ ಕೆ.ಎ.16/ಇ.ಎಫ್.-6937 ರ ಬೈಕನ್ನು ಠಾಣೆಗೆ ಹಾಜರುಪಡಿಸಿದ್ದು, ನಿಪಿ.4 ರಂತೆ ಸದರಿ ಬೈಕನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಆ ನಂತರದಲ್ಲಿ ಕೆ.ಎ.16/ಇ.ಎಫ್.-6937 ರ ಬೈಕಿನ ಕುರಿತು ಐ.ಎಂ.ವಿ. ವರದಿಯನ್ನು ನೀಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ ರವರಿಗೆ ನಿವೇದನೆಯನ್ನು ನೀಡಿದ್ದು ನಿಪಿ.13 ರಂತೆ ಬೈಕಿಗೆ ಸಂಬಂಧಿಸಿದಂತೆ ವಾಹನ ತಪಾಸಣ ವರದಿಯನ್ನು ಸಹ ಸ್ವೀಕರಿಸಿರುತ್ತೇನೆ ಎಂದರೆ ಸರಿ. ಈ ಮೇಲ್ಕಂಡ ತನಿಖೆಯವರೆಗಿನ ಅಂಶಗಳನ್ನು ಪರಿಗಣಿಸಿದಾಗ ಕೆ.ಎ.16/ಇ.ಎಫ್.-6937 ರ ಬೈಕಿನಿಂದ ಅಪಘಾತ ಆಗಿತ್ತು ಎಂದು ಕಂಡುಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಗಾಯಾಳುವಿನ ಹೇಳಿಕೆಯನ್ನು ಐ.ಎಂ.ವಿ. ವರದಿಯನ್ನು ಸ್ವೀಕರಿಸಿದ ನಂತರ ಪಡೆದುಕೊಂಡಿದ್ದು, ದಿನಾಂಕ 02.08.2018 ರಂದು ಗಾಯಾಳುವಾದ ಸಂತೋಷ್ ಬಿನ್ ಶೇಖರಪ್ಪರವರ ಹೇಳಿಕೆಯನ್ನು ಪಡೆದುಕೊಂಡೆನು ಎಂದು ಹೇಳುತ್ತಾರೆ. ಬೈಕಿನ ಅಪಘಾತದಲ್ಲಿ ಸಂತೋಷ್ ಬಿನ್ ಶೇಖರಪ್ಪ ರವರಿಗೆ ಯಾವ ರೀತಿಯ ಅಂಗನ್ಯೂನ್ಯತೆ ಉಂಟಾಗಿತ್ತು ಎಂದು ನಾನು ಗಾಯದ ಪ್ರಮಾಣ ಪತ್ರವನ್ನು ನೋಡಿಲ್ಲ. ನಾನು ಗಾಯಾಳುವಾದ ಸಂತೋಷ್ ಬಿನ್ ಶೇಖರಪ್ಪರವರನ್ನು ದಿನಾಂಕ 02.08.2018 ರಂದು ಅವರ ಮನೆಯಲ್ಲಿ ಹೇಳಿಕೆಯನ್ನು ಪಡೆದುಕೊಳ್ಳುವ ಕಾಲಕ್ಕೆ ನೋಡಿದ್ದೆನು. ನಾನು ಗಾಯಾಳುವಾದ ಸಂತೋಷ್ ಬಿನ್ ಶೇಖರಪ್ಪರವರ ಹೇಳಿಕೆಯನ್ನು ಪಡೆದುಕೊಳ್ಳುವ ಕಾಲಕ್ಕೆ ಟ್ರಾಕ್ಟರ್‌ನ ಮೇಲಿಂದ ಬಿದ್ದು, ಸೊಂಟಕ್ಕೆ ಮತ್ತು ಬೆನ್ನಿಗೆ ಪೆಟ್ಟಾಗಿದೆ ಎಂದು ಹೇಳಿದ್ದರು. ಗಾಯಾಳುವಿನ ಹೇಳಿಕೆಯನ್ನು ಪಡೆಯಲು ನಾನು ಒಬ್ಬನೆ ಹೋಗಿದ್ದೆನು. ಗಾಯಾಳುವಿನ ಹೇಳಿಕೆಯನ್ನು ಗಣಕೀಕೃತ

ಯಂತ್ರದಲ್ಲಿ ಬೆರಳಚ್ಚುಮಾಡಿ ಮುದ್ರಣ ತೆಗೆಯಲಾಗಿದೆ ಎಂದರೆ ಸರಿ. ನಾನು ನಿಪಿ.11 ರ ಗಾಯಾಳುವಿನ ಹೇಳಿಕೆಯನ್ನು ಆತನ ಗ್ರಾಮವಾದ ಚೀರನಹಳ್ಳಿಯ ಗಾಯಾಳುವಿನ ಮನೆಯಲ್ಲಿ ಪಡೆದುಕೊಂಡಿಲ್ಲ, ಬದಲಾಗಿ ಠಾಣೆಯಲ್ಲಿಯೇ ಗಾಯಾಳುವಿನ ಹೇಳಿಕೆಯನ್ನು ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಹೆಚ್.ಆರ್.ಎಸ್ ಯವರಿಂದಃ**

1 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ